# ವಿದ್ಯಾರ್ಥಿಪ್ರಭ

## ಐಸ್‌ಕ್ರೀಮ್‌ಗಿಂತ ರುಚಿ

(ರಘು, ರಾಧಿಕಾ ಇಬ್ಬರೂ ಸುಧಾ–ಚಂದ್ರು ದಂಪತಿಗಳ ಮಕ್ಕಳು. ಸಿದ್ಧಾರ್ಥ ಚಂದ್ರುವಿನ ಗೆಳೆಯ. ಸರಿತಾ ರಾಧಿಕೆಯ ಗೆಳತಿ)

**ರಾಧಿಕಾ:** ನಮ್ಮ ಶಾಲೆಯಲ್ಲಿ ಇವತ್ತು ಮೇಷ್ಟ್ರು ಏನು ಹೇಳಿದ್ರು ಗೊತ್ತಾ. ಸ್ವತಂತ್ರ ಚಿಂತನೆಯೇ ಎಲ್ಲ ಬೆಳವಣಿಗೆಗೆ ಮೂಲ ಎಂದರು. ಗೆಲಿಲಿಯೋ, ಕೋಪರ್‌ನಿಕಸ್ ಎಂಬ ವಿಜ್ಞಾನಿಗಳ ಉದಾಹರಣೆ ಕೂಡ ಕೊಟ್ಟರು. ಅವರಿಬ್ಬರು ಆಗಿನ ಕಾಲದ ಮೂಢನಂಬಿಕೆಗಳಿಗೆ ಕಟ್ಟುಬಿದ್ದಿದ್ದರೆ, ಗೆಲಿಲಿಯೋ ಭೂಮಿ ದುಂಡಾಗಿದೆ ಎನ್ನುವುದನ್ನು ಕಂಡು ಹಿಡಿಯುತ್ತಿರಲಿಲ್ಲ, ಕೋಪರ್‌ನಿಕಸ್ ಸೂರ್ಯ ಸೌರವ್ಯೂಹದ ಕೇಂದ್ರ ಎಂದೂ ಸಾಧಿಸಿ ತೋರಿಸುತ್ತಿರಲಿಲ್ಲ. ಈಗ ನನಗೆ ಅರ್ಥವಾಗಿದೆಯಪ್ಪ. ಸ್ವತಂತ್ರವಾಗಿ ಆಲೋಚಿಸುವುದು ಸುಮ್ಮನೆ ಬೆಪ್ಪನಂತೆ ನಂಬುವುದಕ್ಕಿಂತ ಎಷ್ಟೋ ಉತ್ತಮ.

**ಸರಿತಾ:** ಏನೋ ಅಮ್ಮ, ನಿನ್ನನ್ನು ವಾದದಲ್ಲಿ ಸೋಲಿಸಲು ಆಗುವುದಿಲ್ಲ. ಅವರೆ ನನ್ನ ದಾರಿಯೇ ಬೇರೆ ನೋಡು.

**ಚಂದ್ರು:** ನೋಡೋ, ಸಿದ್ಧಾರ್ಥ, ಈ ಹುಡುಗರನ್ನು. ಯಾವಾಗಲೂ ವಾದ ಮಾಡ್ತಾನೇ ಇರ್ತಾರೆ.

**ಸರಿತಾ :** ಮಾಮ, ನಾನೊಂದು ಪ್ರಶ್ನೆ ಕೇಳ್ತೇನೆ. ನೀವು ನಿಮ್ಮ ಜೀವನದಲ್ಲಿ ಸಂತೋಷವಾಗಿದ್ದೀರಾ?

**ಸಿದ್ಧಾರ್ಥ :** ನೋಡಿದೆಯಾ, ಚಂದ್ರು, ಈಗಿನ ಹುಡುಗರು ಎಂತಹ ಪ್ರಶ್ನೆಗಳನ್ನು ಕೇಳುತ್ತಾರೆ ಅಂದ್ರೆ, ಇವರಿಗೆ ಉತ್ತರ ಹೇಳುವುದಕ್ಕೆ ನಾವು ವಿಶೇಷ ತರಬೇತಿ ತಗೋಬೇಕು. ಈ ಚಿಕ್ಕ ಹುಡುಗಿ ಎಂಥ ದೊಡ್ಡ ಪ್ರಶ್ನೆ ಕೇಳಿಬಿಟ್ಟಳಪ್ಪ. ಏನಂತ ಉತ್ತರ ಕೊಡಲಿ?

**ಚಂದ್ರು:** ನನ್ನನ್ನು ಕೇಳಿದರೆ ' ನಾನು ನನ್ನ ಜೀವನದಲ್ಲಿ ಸಂತೋಷವಾಗಿದೀನಿ' ಅಂತಾನೇ ಹೇಳ್ತೀನಪ್ಪ. ಸಿದ್ಧಾರ್ಥ, ನಮ್ಮ ಮಕ್ಕಳು ಈ ಬಗೆಯ ಪ್ರಶ್ನೆಗಳನ್ನು ಕೇಳಿದಾಗ, ನಮ್ಮ ಬದುಕು **ಏಕೆ** ಸಂತೋಷವಾಗಿದೆ, ಅದನ್ನು ನಾವು **ಹೇಗೆ** ಸಾಧಿಸಿದೆವು ಎಂಬುದನ್ನು ಹೇಳೋದು ಒಳ್ಳೆಯದು ಕಣೋ.

**ಸಿದ್ಧಾರ್ಥ:** ಸರಿ. ನೋಡಿ ಮಕ್ಕಳೇ, ನನ್ನ ಜೀವನದಲ್ಲಿ ಪ್ರಭಾವ ಬೀರಿದ ಇಬ್ಬರು ಮಹಾನ್ ವ್ಯಕ್ತಿಗಳ ಬಗ್ಗೆ ಹೇಳ್ತೀನಿ. ಒಬ್ಬರು ಡಾ. ಆಲ್ಬರ್ಟ್ ಐನ್‌ಸ್ಟೈನ್. ಅವರ ಕೈಕೆಳಗೆ ನಾನು ಅಮೆರಿಕೆಯಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮಾಡುತ್ತಿದ್ದೆ. ಅವರು ನನ್ನಲ್ಲಿ **ಪ್ರಶ್ನಿಸುವ ಮನೋಭಾವವನ್ನು** ಬೆಳೆಸಿದರು. ಪ್ರತಿಯೊಂದು ಸಂಗತಿಯನ್ನು ಹೊಸದಾಗಿ ಕಾಣಬೇಕು, ಯಾವುದೇ ಸಂಗತಿಯನ್ನು ಹಿಂದಿನ ರೀತಿಯಲ್ಲೇ ನೋಡಬಾರದು ಮತ್ತು ನಮ್ಮ ಸುತ್ತಮುತ್ತಲೆಲ್ಲಾ ಅಚ್ಚುಕಟ್ಟುತನ ಮತ್ತು ಸೌಂದರ್ಯವನ್ನೇ ಅನ್ವೇಷಿಸಬೇಕು ಎಂದು ಅವರು ಹೇಳಿಕೊಟ್ಟರು.

ಮತ್ತೊಬ್ಬರು ಯಾರು ಗೊತ್ತಾ? ಸ್ವಾಮಿ ರಂಗನಾಥಾನಂದಜಿ ಅವರು. ಅವರು ರಾಮಕೃಷ್ಣ ಆಶ್ರಮದ ಸ್ವಾಮೀಜಿ. ಅವರು ನನಗೆ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಪರಿಚಯ ಮಾಡಿಕೊಟ್ಟರು. ಆ ವಿಚಾರಗಳು ಎಂತಹ ಕ್ರಾಂತಿಕಾರಕವಾದುವುಗಳು! ಸ್ವಾಮೀಜಿಯ ಚಿಂತನೆಗಳು ನನ್ನಲ್ಲಿ ಬದುಕು ಅರ್ಥಪೂರ್ಣವಾದುದು ಎಂಬ ದೃಢ ಶ್ರದ್ಧೆಯನ್ನು ನನ್ನಲ್ಲಿ ಮೂಡಿಸಿತು. ನನ್ನ ಜೀವನಕ್ಕೆ ಏನೋ ಒಂದು ದೊಡ್ಡ ಉದ್ದೇಶ ಇದೆ ಅಂತ ಗೊತ್ತಾಯ್ತು. ಆಗ ನಾನು ನನ್ನನ್ನು ಗೌರವಿಸಿಕೊಳ್ಳಲು ಕಲಿತುಕೊಂಡೆ. ನನ್ನಲ್ಲಿ ಎಲ್ಲೋ ಒಳಗೆ ಪ್ರಕಾಶಮಾನವಾದ ಬೆಳಕಿದೆ. ಅದು ನನ್ನ ಆಲೋಚನೆಗಳು, ಭಾವನೆಗಳು, ಮಾತುಗಳು ಮತ್ತು ಕ್ರಿಯೆಗಳ ಮೂಲಕ ಕಾಣಿಸಿಕೊಳ್ಳುತ್ತಾ ಇದೆ ಎನ್ನುವುದನ್ನು ಸ್ವಾಮೀಜಿಯವರ ಪುಸ್ತಕಗಳನ್ನು ಓದಿ ನಾನು ತಿಳಿದುಕೊಂಡೆ. ನನ್ನಲ್ಲೇ ಇರುವ ಆ ದಿವ್ಯ ಬೆಳಕು ನನ್ನ ವ್ಯಕ್ತಿತ್ವದಲ್ಲಿ ಹೆಚ್ಚು ಹೆಚ್ಚು ಪ್ರಕಾಶಿಸಲು ಅವಕಾಶವಾಗುವಂತೆ ನನ್ನ ಜೀವನವನ್ನು ನಾನಾಗ ರೂಪಿಸಿಕೊಂಡೆ.

**ರಾಧಿಕಾ:** ಮಾಮ, ನೀವು ಸ್ವಾಮೀಜಿಯವರನ್ನು ಭೇಟಿ ಮಾಡುವ ಮೊದಲು ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡಿದ್ದರಲ್ವಾ. ಎಲ್ಲಾನೂ ಪ್ರಶ್ನಿಸುವ ಪ್ರವೃತ್ತಿಗೂ ನಿಮ್ಮ ಈ ಧಾರ್ಮಿಕ ನಂಬಿಕೆಗಳಿಗೂ ಘರ್ಷಣೆ ಬರಲಿಲ್ಲವೇ?

**ಸಿದ್ಧಾರ್ಥ:** ಆಹಾ! ಮಗು. ಎಂತಹ ಒಳ್ಳೇ ಪ್ರಶ್ನೆ ಕೇಳಿದೆಯಮ್ಮಾ. ಸ್ವಾಮೀಜಿಯವರ ಭಾವನೆಗಳು ಮೂಢ ನಂಬಿಕೆಗಳು ಅಲ್ಲವೇ ಅಲ್ಲ! ಸ್ವಾಮೀಜಿನೇ ಹೇಳಿದ್ದಾರಮ್ಮಾ, 'ಮೂಢ ನಂಬಿಕೆ ಧರ್ಮದ ಅಂಗವೇ ಅಲ್ಲ' ಅಂತ. ಕಂದಾಚಾರಕ್ಕೂ ಸತ್ಯಕ್ಕೂ ಅಜಗಜಾಂತರ. ಸತ್ಯವನ್ನು ಏಕೆ, ಹೇಗೆ ಎಂದು ನೀನು ಪ್ರಶ್ನಿಸಬಹುದು. ಆದರೆ ಕಂದಾಚಾರ ಪ್ರಶ್ನೆಗಳ ಮುಂದೆ ನಿಲ್ಲೋದಿಲ್ಲ. ವಿಜ್ಞಾನ ಏನನ್ನು ಹುಡುಕುತ್ತಿದೆ ಹೇಳು? ಸತ್ಯವನ್ನು. ಅದೇ ರೀತಿ ವೇದಾಂತ ಹುಡುಕುತ್ತಿರುವುದೂ ಸತ್ಯವನ್ನೇ. ವೈಜ್ಞಾನಿಕ ಅನ್ವೇಷಣೆ ಎಂದರೆ ಏನು ಹೇಳು, ನೋಡೋಣ. ನಮ್ಮ ಕಣ್ಣು, ಕಿವಿ ಮುಂತಾದ ಇಂದ್ರಿಯಗಳನ್ನು ಉಪಯೋಗಿಸಿ, ಮಾಹಿತಿಗಳನ್ನು ಸಂಗ್ರಹ ಮಾಡೋದು ಮೊದಲನೆಯ ಹೆಜ್ಜೆ. ನಂತರ ' ಇದು ಯಾಕೆ ಹೀಗಿದೆ?', 'ಇದು ಯಾಕೆ ಹೀಗಿಲ್ಲ?' ಅಂತೆಲ್ಲಾ ಪ್ರಶ್ನೆ ಕೇಳುತ್ತಾ ಉತ್ತರ ಹುಡುಕುತ್ತ ಹೋಗೋದು ಎರಡನೆ ಹೆಜ್ಜೆ, ಅಲ್ವೇನಮ್ಮಾ. ಇದು ವಿಜ್ಞಾನ ಕೆಲಸ ಮಾಡೋ ವಿಧಾನ. ಈಗ ನೋಡು, ಸ್ವಾಮಿ ವಿವೇಕಾನಂದರು ಈ ವಿಧಾನವನ್ನೇ ಹೇಳ್ತಾರೆ, ಮಗು. ಆದರೆ ಇಲ್ಲಿ ನಾವು ಅನ್ವೇಷಣೆ ಮಾಡೋದು ನಮ್ಮ ವ್ಯಕ್ತಿತ್ವವನ್ನೇ. ನಾವು ಪ್ರಪಂಚದ ಬಗ್ಗೆ ನೂರಾರು ವರ್ಷಗಳಿಂದ ಪ್ರಶ್ನೆಗಳನ್ನು ಕೇಳುತ್ತಲೇ ಬಂದಿದ್ದೇವೆ, ಉತ್ತರ ಪಡೆದು

### ಪ್ರಶ್ನಿಸು – ಪರೀಕ್ಷಿಸು – ಚಿಂತಿಸು

ನೀನು ಉತ್ತರಗಳನ್ನು ಪಡೆಯುವೆ

ಜೇಮ್ಸ್ ವಾಟ್ ಚಿಕ್ಕ ಹುಡುಗ. ಒಲೆಯ ಮೇಲಿಟ್ಟಿದ್ದ ನೀರಿನ ಕೆಟಲ್ ಕುದಿಯುತ್ತಿರುವುದನ್ನು ನೋಡಿದ. ಆಗ ಅದರ ಮುಚ್ಚಳ ಆಗಾಗ ತೆರೆದುಕೊಳ್ಳುತ್ತಿತ್ತು. ವಾಟ್ ಇದೇಕೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ. ಕೆಟಲ್‌ನಿಂದ ಹೊರಗೆ ಬರುತ್ತಿದ್ದ ಹಬೆಯೇ ಈ ಶಕ್ತಿಯ ಮೂಲ ಎನ್ನುವುದನ್ನು ಕಂಡುಕೊಂಡ. ಇದೇ ಅವನಿಗೆ ೧೭೬೯ ರಲ್ಲಿ ಹಬೆಯ ಇಂಜಿನ್ ಅನ್ನು ತಯಾರಿಸಲು ಪ್ರೇರಣೆ ನೀಡಿತು. ಅದರಿಂದ ಪ್ರಯಾಣ ಮತ್ತು ಸಾಗಾಣಿಕೆ ಕ್ಷೇತ್ರದಲ್ಲಿ ಕ್ರಾಂತಿಯೇ ಆಯಿತು.

ಕೊಳ್ಳುತ್ತಲೇ ಬಂದಿದ್ದೇವೆ. ಈಗ ನಮ್ಮ ಬಗ್ಗೆ, ನಾನು ನಿಜವಾಗಲೂ **ಯಾರು?** ಎನ್ನುವ ಬಗ್ಗೆ ಪ್ರಶ್ನೆಗಳನ್ನು ಹಾಕೋ ಬೇಕು. **'ನನ್ನ ಮನಸ್ಸಿನಲ್ಲಿ ಮೂಡುವ ಆಲೋಚನೆಗಳು ಯಾವುವು?, ಆ ಆಲೋಚನೆಗಳನ್ನು ಯಾರು ನಿಯಂತ್ರಣ ಮಾಡುತ್ತಾರೆ?'** – ಈ ತರಹದ ಪ್ರಶ್ನೆಗಳನ್ನು ನಿನಗೆ ನೀನೇ ಕೇಳಿಕೋ, ಪರೀಕ್ಷಿಸಿಕೋ, ಚಿಂತಿಸು. ಆಗ ನೋಡು, ಎಂತಹ ಶ್ರೇಷ್ಠ ಉತ್ತರಗಳನ್ನು ನೀನು ಪಡೆದುಕೊಳ್ಳುತ್ತೀಯೆ.

**ಸರಿತಾ:** ಇದು ಬಹಳ ಆಸಕ್ತಿ ಹುಟ್ಟಿಸುತ್ತಿದೆ. ಹಾಗಾದರೆ ವಿವೇಕಾನಂದರು ಕಂಡುಹಿಡಿದಿದ್ದು ' ವೈಜ್ಞಾನಿಕ ಧರ್ಮ' ಎಂದು ಹೇಳಬಹುದು ಅಲ್ವಾ, ಮಾಮ?

**ಸಿದ್ಧಾರ್ಥ:** ಸರಿಯಾಗಿ ಹೇಳಿದೆ, ಮಗೂ. ನೀನು ಉಪನಿಷತ್ತುಗಳ ಬಗ್ಗೆ ಕೇಳಿರಬಹುದು. ಅವು ಅತ್ಯಂತ ಪುರಾತನ ಭಾರತೀಯ ಗ್ರಂಥಗಳು. ಅವುಗಳ ಕಾಲವನ್ನು ವಿದ್ವಾಂಸರು ಇನ್ನೂ ಕಂಡುಹಿಡಿದಿಲ್ಲ, ನೋಡು. ಅವುಗಳಲ್ಲಿ ಈ ಬಗೆಯ ವೈಜ್ಞಾನಿಕ ಚಿಂತನೆ, ವಿಚಾರ, ಚರ್ಚೆಗಳನ್ನು ಕಾಣಬಹುದು. ನೋಡು, ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಪುರಾತನರು ಎಷ್ಟು ವಿಚಾರಶಾಲಿಗಳಾಗಿದ್ದರು! ಅವರು ಅಲ್ಲಿ ಉಪಯೋಗಿಸಿರುವ ಭಾಷೆ, ವಿಚಾರ ಎಷ್ಟು ಚೆನ್ನಾಗಿದೆ ಗೊತ್ತಾ?

**ರಾಧಿಕಾ:** ನೀವೇನೋ ಸ್ವಾಮೀಜಿಯವರ ವೇದಾಂತ ಮತ್ತು ವೈಜ್ಞಾನಿಕ ಮನೋಭಾವಗಳ ಬಗ್ಗೆ ಚೆನ್ನಾಗಿಯೇ ಹೇಳಿದಿರಿ. ಆದರೆ ಅವೆರಡರ ಮಧ್ಯೆ ಇರುವ ವ್ಯತ್ಯಾಸ ಏನು, ಸಮಾನ ಅಂಶ ಏನು ಅಂತ ಹೇಳಿ ಕೊಡ್ತೀರಾ?

**ಸಿದ್ಧಾರ್ಥ:** ನೋಡು, ರಾಧಿಕಾ, ವಿಜ್ಞಾನ ಹೊರಗಿನ ಜಗತ್ತಿನ ಅಧ್ಯಯನ ಮಾಡುತ್ತದೆ. ವೇದಾಂತದಲ್ಲಿ, ನಾನು ನನ್ನನ್ನೇ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ. ಇವೆರಡೂ ಅನುಸರಿಸುವುದು ವೈಚಾರಿಕ ಮತ್ತು ವೈಜ್ಞಾನಿಕ ವಿಧಾನವನ್ನೇ. ಇರಲಿ, ನಿನಗೆ 'ವೈಚಾರಿಕತೆ' ಎಂದರೆ ಏನು ಅಂತ ಗೊತ್ತಾ?

**ಸರಿತಾ:** ಯಾವುದೇ ಸಂಗತಿಯನ್ನು ಅದು ಸರಿಯಾ ತಪ್ಪಾ ಎಂದು ವಿಚಾರ ಮಾಡಿ ನಂತರವೇ ಒಪ್ಪಿಕೊಳ್ಳೋದು, ಅಲ್ವಾ, ಮಾಮ?

**ಸಿದ್ಧಾರ್ಥ:** ಈಗ ನನ್ನ ಮಾತು ಕೇಳು. ನೀನು ಚೆಂಡು ಎಸೆದಾಗ ಕೆಳಕ್ಕೆ ಬರೋದು ಯಾಕೆ? ಗುರುತ್ವಾಕರ್ಷಣ ಶಕ್ತಿಯಿಂದ ಅಲ್ವೇ? ನಾನು ಹೇಳ್ತೀನಿ, ಒಂದು ಭೂತ ಅದನ್ನು ಹಿಡಿದು ಕೆಳಕ್ಕೆ ಎಸೀತಾ ಇದೆ ಅಂತ. ನೀನು ನಂಬಿಬಿಡ್ತೀಯಾ? ಏಕೆ ನಂಬಬಾರದು ಹೇಳು? ಭೂತ ಇಲ್ಲ ಅಂತ ಅದ್ಹೇಗೆ ಹೇಳ್ತಿಯಾ?

**ರಾಧಿಕಾ:** ಮಾಮಾ, ನನಗೆ ಹೇಳಕ್ಕೆ ಆಗ್ತಾ ಇಲ್ಲ, ಆದರೆ ನಿಮ್ಮ ವಿವರಣೆ ಸರಿಯಲ್ಲಾ ಅಂತ ನನಗೆ ಯಾಕೋ ಅನ್ನಿಸುತ್ತಾ ಇದೆ.

**ಸಿದ್ಧಾರ್ಥ:** ಆಹಾ! ಹಾಗೆ ದಾರಿಗೆ ಬಾ! ಹೌದು, ಒಂದು ಸಂಗತಿ ಸರಿಯೋ ತಪ್ಪೋ, ನಿಜವೋ ಸುಳ್ಳೋ ಅನ್ನೋದು ನಮ್ಮ ಬುದ್ಧಿಗೆ ಅನ್ನಿಸಬೇಕು. ಇದೇ 'ವೈಚಾರಿಕತೆ'ಗೆ ಆಧಾರ. ಇನ್ನೊಂದು ಏನಪ್ಪಾ ಅಂದರೆ, ಯಾವುದೇ ಪರಿಸ್ಥಿತಿಯನ್ನು ಅದು ಸರಳ ಮಾಡಿ ಹೇಳಬೇಕು. ಚೆಂಡು ಬೀಳೋದಕ್ಕೆ ಭೂತ ಕಾರಣ ಅಂತ ಹೇಳಿದಾಗ, ಯಾವ ಭೂತ? ಅದು ಆಕಾಶಕ್ಕೆ ಹೇಗೆ ಹೋಯ್ತು? – ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಬೇಕು. ಆಗ ಸಂಗತಿ ತುಂಬ ಗೋಜಲಾಗಿ ಬಿಡುತ್ತೆ, ಅಲ್ವಾ. ಅದೇ ಗುರುತ್ವಾಕರ್ಷಣೆ ಅಂತ ವಿವರಣೆ ಕೊಟ್ಟಾಗ, ಯಾವ ಗೋಜಲೂ ಇರೋದಿಲ್ಲ. ಅದು ವಸ್ತುಗಳ ಸಹಜ ಸ್ವಭಾವವನ್ನು ಹೇಳುತ್ತೆ. ಈಗ ನೋಡಿದೆಯಾ? 'ವೈಚಾರಿಕತೆ' ಎನ್ನುವುದು ಒಂದು ಪರಿಸ್ಥಿತಿಯನ್ನು ಸರಳ ಮಾಡಿ ತೋರಿಸುತ್ತೆ. ಗೊತ್ತಾಯ್ತಾ, ಮಗು.

ನಾನಾಗಲೇ ಹೇಳ್ತಾ ಇದ್ದೆನಲ್ಲ. ನಾವು ಈ ಜಗತ್ತು ಹೇಗಿದೆ ಅಂತಾನೂ ತಿಳಿದುಕೊಳ್ಳಬೇಕು, ನಮ್ಮ ಬಗ್ಗೆಯೂ ತಿಳಿದುಕೊಳ್ಳಬೇಕು. ಇದನ್ನೇ ಕ್ರಮವಾಗಿ, ವಿಜ್ಞಾನ ಮತ್ತು ವೇದಾಂತಗಳು ಮಾಡುತ್ತವೆ.

ಮಕ್ಕಳೇ, ನೀವು ಯಾವ ವಿಷಯವನ್ನು ಓದಬೇಕಾದರೂ ಅದರ ಬಗ್ಗೆ ನಿಮಗೆ ಗೌರವ ಇರಬೇಕು. ನಮ್ಮ ಹಿರಿಯರು ಇದುವರೆಗೂ ಏನನ್ನು ಕಂಡುಹಿಡಿದರೋ ಅದನ್ನು ಶ್ರದ್ಧೆಯಿಂದ ತಿಳಿದುಕೊಳ್ಳಬೇಕು. ಹಾಗೆಯೇ ಪ್ರಶ್ನೆ ಹಾಕುತ್ತ, ವಿಷಯವನ್ನು ಇನ್ನಷ್ಟು ಆಳವಾಗಿ ತಿಳಿದುಕೊಳ್ಳುವ ಮತ್ತು ಹೊಸ ಹೊಸ ವಿಚಾರಗಳನ್ನು ಕಂಡುಹಿಡಿಯುವ ಎದೆಗಾರಿಕೆಯೂ ನಿಮಗಿರಬೇಕು. ಆಗ ಮಾತ್ರ ಹಿರಿಯರು ನಿಮ್ಮ ಬಗ್ಗೆ ಅಭಿಮಾನಪಡುತ್ತಾರೆ. ಭಾರತ ದೇಶದ ನಮ್ಮ ಪುರಾತನ ಋಷಿಮುನಿಗಳು ಬಹಳ ಗಟ್ಟಿವ್ಯಕ್ತಿತ್ವದವರೂ ಸ್ವತಂತ್ರ ಚಿಂತಕರೂ ಆಗಿದ್ದರು ಎನ್ನುವುದನ್ನು ಮರೀಬೇಡ.

**ರಘು:** ಅಂತೂ ಸಿದ್ಧಾರ್ಥ ಮಾಮ ಬಂದು ಇವರಿಬ್ಬರ ನಡುವೆ ಜಗಳ ಬಿಡಿಸಿ, ಒಂದು ಇತ್ಯರ್ಥ ಮಾಡಿದರು. ರಾಧಿಕಾ ಅಕ್ಕ ಎಲ್ಲಕ್ಕೂ ಸವಾಲು ಹಾಕಬೇಕು ಅಂತ ಹೇಳ್ತಾ ಇದ್ದಳು. ಸರಿತಾ ಅಕ್ಕ ಅಷ್ಟೊಂದು ಮುಂದೆ ಹೋಗಬಾರದು ಅಂತ ವಾದಿಸುತ್ತಿದ್ದಳು.

**ಸಿದ್ಧಾರ್ಥ:** ಇದರ ಬಗ್ಗೆ ಸ್ವಾಮಿ ವಿವೇಕಾನಂದರು ಏನು ಹೇಳುತ್ತಿದ್ದರು ಗೊತ್ತಾ? "ನಮಗೆ ಬೇಕಾಗಿರುವುದು ವೇದಾಂತದ ಜೊತೆಗೂಡಿದ ಪಾಶ್ಚಾತ್ಯ ವಿಜ್ಞಾನ ಮತ್ತು ಅದರ ಮಾರ್ಗದರ್ಶಕ ಸೂತ್ರವಾಗಿ ಬ್ರಹ್ಮಚರ್ಯ ಹಾಗೂ ಶ್ರದ್ಧೆ ಮತ್ತು ಆತ್ಮವಿಶ್ವಾಸ" ಎಂದು. ನೀವೆಲ್ಲ ಈ ವಾಕ್ಯವನ್ನು ಬಾಯಿಪಾಠ ಮಾಡಿ.

**ರಾಧಿಕಾ:** ಮಾಮಾ, ಶ್ರದ್ಧೆ ಅಂದರೆ ಆತ್ಮವಿಶ್ವಾಸ ಅಂತಲೇ ಅಲ್ವಾ?

**ಸರಿತಾ :** ಮಾಮಾ, ಬ್ರಹ್ಮಚರ್ಯ ಎಂದರೆ ಏನು?

**ಸುಧಾ (ಚಂದ್ರುವಿನ ಹೆಂಡತಿ):** ಏನು ಮೋಡಿ ಹಾಕಿಬಿಟ್ಟಿರಿ, ಈ ಮಕ್ಕಳ ಮೇಲೆ. ನಾನು ಬಟ್ಟರ್ ಸ್ಕಾಚ್ ಐಸ್‌ಕ್ರೀಮ್, ಹಣ್ಣಿನ ಸಾಲಡ್ ಎಲ್ಲ ತಂದು ಟೇಬಲ್ಲಿನ ಮೇಲಿಟ್ಟಿದ್ದೀನಿ. ಇವರೆಲ್ಲ ನಿಮ್ಮ ಜೊತೆ ಮಾತನಾಡ್ತಾ, ಅದರ ಬಗ್ಗೆ ಗಮನವೇ ಹರಿಸುತ್ತ ಇಲ್ವಲ್ಲಾ?

**ಸಿದ್ಧಾರ್ಥ:** ಮಕ್ಕಳೇ, ಎಲ್ಲ ವಿಷಯಗಳನ್ನೂ ಒಂದೇ ದಿನ ಕಲಿಯೋದು ಸಾಧ್ಯವೇ? ಮುಂದಿನ ಸಲ ಬಂದಾಗ ಮಾತಾಡೋಣ. ಈಗ ಐಸ್ ಕ್ರೀಮ್, ಫ್ರೂಟ್–ಸಾಲಡ್ ಸವಿಯೋಣ, ಬನ್ನಿ!

**ಈ ಪ್ರಶ್ನೆಗಳಿಗೆ ನೀವೇ ಉತ್ತರ ಕಂಡುಕೊಳ್ಳಿ:**

*೧. ಸಿದ್ಧಾರ್ಥ ಮಾಮನಿಗೆ ಪ್ರಭಾವ ಬೀರಿದ ವ್ಯಕ್ತಿಗಳಾರು? ಏಕೆ?*

*೨. ವೇದಾಂತ–ವಿಜ್ಞಾನ ಏನನ್ನು ಹುಡುಕಲು ಹೊರಟವೆ?*

*೩. ವೈಚಾರಿಕತೆ ಅಂದರೆ ಏನು? ಅದಕ್ಕೆ ಉದಾಹರಣೆ ಯಾವುದು?*

**(ಈ ಸಂಭಾಷಣೆಯಿಂದ ಕಲಿತ ಗುಣ:** ***ವೈಚಾರಿಕತೆ.*** **ಮುಂದಿನ ತಿಂಗಳು ಕಲಿಯುವ ಗುಣ:** ***ಮನಸ್ಸಿನ ಏಕಾಗ್ರತೆ*** **)**

**ಕೃಪೆ:** *How shall I be ?*, Publisher: Ramakrishna Mission, Belur Math, Howrah West Bengal 711 202